# ಶರಾವತಿ ನದಿಯನ್ನೇಕೆ ಕೊಲ್ಲುವಿರಿ?

**ಗುಣಮಟ್ಟದ ವಿದ್ಯುತ್ ಉತ್ಪಾದನೆ ಹಾಗೂ ಅಭಿವೃದ್ಧಿ ಹೆಸರಿನಲ್ಲಿ ಶರಾವತಿ ನದಿಯನ್ನು ಶೋಷಿಸುವ ಪ್ರಯತ್ನಗಳು ನಡೆಯುತ್ತಿವೆ. ಈಗಾಗಲೇ ಏಳು ಅಣೆಕಟ್ಟುಗಳಿಂದ ಬಡವಾಗಿರುವ ನದಿ, 'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆಯಿಂದ ಅಸ್ತಿತ್ವನಾಶದ ಆತಂಕ ಎದುರಿಸುತ್ತಿದೆ.**

**■ ಅಖಿಲೇಶ್ ಚಿಪ್ಪಳಿ**



ಯಾವ ಸಂಪತ್ತನ್ನು ಶಾಶ್ವತ, ಶ್ರೇಷ್ಠ ಮತ್ತು ಸಾರ್ವಭೌಮವೆಂದು ಪರಿಗಣಿಸಬೇಕಾಗಿತ್ತೋ, ಆ ಸಂಪತ್ತನ್ನು ನಾಶ ಮಾಡಿ, ಅದರ ಗೋರಿಯ ಮೇಲೆ ವಿಜೃಂಭಿಸುವ ಹಾಗೂ ಅದನ್ನು ಅಭಿವೃದ್ಧಿ ಎಂದು ಬಿಂಬಿಸುವ ಹೊಸ ಹೊಸ ಹುನ್ನಾರಗಳನ್ನು ಸರ್ಕಾರಗಳು ಮುನ್ನೆಲೆಗೆ ತರುತ್ತಿವೆ. ಮಧ್ಯ ಪಶ್ಚಿಮಘಟ್ಟದ ಅಪೂರ್ವ ನೈಸರ್ಗಿಕ ಸಂಪತ್ತನ್ನು ಕೆಲವೇ ಜನರ ಜೇಬು ತುಂಬಿಸುವ ಸಲುವಾಗಿ ಬಲವಂತವಾಗಿ ಹೇರಲಾಗುವ ಹಲವು ಯೋಜನೆಗಳು, ವಾಸ್ತವಿಕವಾಗಿ ನಾಗರಿಕ ಸಮಾಜಕ್ಕೆ ಹೊರೆಯಾಗುತ್ತಿವೆ. ಸಾರ್ವಜನಿಕರ ತೆರಿಗೆ ಹಣವನ್ನು ಬೇಕಾಬಿಟ್ಟಿಯಾಗಿ ಪೋಲು ಮಾಡಲಾಗುತ್ತಿದೆ. ಆಡಳಿತವೇ ಮುಂದೆ ನಿಂತು ಈ ಕೈಂಕರ್ಯಕ್ಕೆ ಮುಂದಾಗಿದೆ.

## ಶರಾವತಿ ನದಿಗೆಷ್ಟು ಅಣೆಕಟ್ಟು?

ತೀರ್ಥಹಳ್ಳಿಯ ಅಂಬುತೀರ್ಥದಲ್ಲಿ ಹುಟ್ಟಿ ಹೊಸನಗರ, ಸಾಗರ ತಾಲ್ಲೂಕು ಮಾರ್ಗವಾಗಿ ಸಾಗಿ ಅತ್ತ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಅರಬ್ಬಿ ಸಮುದ್ರ ಸೇರುವ ಶರಾವತಿ ನದಿಯ ಉದ್ದ 132 ಕಿ.ಮೀ. ಇಷ್ಟು ಚಿಕ್ಕ ನದಿಗೆ ಮತ್ತದರ ಉಪನದಿಗಳಿಗೆ ಈಗಾಗಲೇ ಏಳು ಅಣೆಕಟ್ಟುಗಳನ್ನು ಕಟ್ಟಲಾಗಿದೆ.

ಜಲವಿದ್ಯುತ್ ಯೋಜನೆಗಾಗಿ ಮೊಟ್ಟ ಮೊದಲ ಬಾರಿಗೆ 1939ರಲ್ಲಿ ಮಡೆನೂರು ಅಣೆಕಟ್ಟಿನ ನಿರ್ಮಾಣ ಕಾರ್ಯ ಆರಂಭವಾಯಿತು; ಅದು 1948ರಲ್ಲಿ ಪೂರ್ಣಗೊಂಡು, 1949ರಲ್ಲಿ ಲೋಕಾರ್ಪಣೆಗೊಂಡಿತು. ಈ ಅಣೆಕಟ್ಟೆಗೆ ಹಿರೇಭಾಸ್ಕರ ಅಣೆಕಟ್ಟು ಎಂದೂ ಕರೆಯಲಾಗುತ್ತಿತ್ತು. 27.52 ಚ.ಕಿ.ಮೀ. ಪ್ರದೇಶವನ್ನು ಈ ಅಣೆಕಟ್ಟು ಮುಳುಗಿಸಿತು. ಶರಾವತಿಯಲ್ಲಿ ನೀರಿನ ಹರಿವಿನ ಪ್ರಮಾಣ ಇಳಿಮುಖವಾಯಿತು. ಈ ಅಣೆಕಟ್ಟುಗಳ ಹೊರತಾಗಿ ಕಾರ್ಗಲ್‌ನಲ್ಲಿ (ಚೈನಾ ಗೇಟ್) ಚಿಕ್ಕ ಸಂತುಲನ ಅಣೆಕಟ್ಟು ನಿರ್ಮಿಸಲಾಗಿದೆ.

1964ರಲ್ಲಿ ಸಾಗರ ತಾಲ್ಲೂಕಿನ ಕಾರ್ಗಲ್ ಸಮೀಪ ನಿರ್ಮಿಸಲಾದ ಲಿಂಗನಮಕ್ಕಿ ಅಣೆಕಟ್ಟಿನ ಎತ್ತರ 61.26 ಮೀಟರ್ ಮತ್ತು ಉದ್ದ 2.4 ಕಿ.ಮೀ. 152 ಟಿ.ಎಂ.ಸಿ. ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ ಈ ಅಣೆಕಟ್ಟು ಮುಳುಗಿಸಿದ್ದು ಬರೋಬ್ಬರಿ 300 ಚ.ಕಿ.ಮೀ. ಪ್ರದೇಶ. ಹೀಗೆ ಮುಳುಗಿದ ಪ್ರದೇಶದಲ್ಲಿ ಮಡೆನೂರು ಅಣೆಕಟ್ಟು ಕೂಡ ಮುಳುಗಿ ಇತಿಹಾಸ ಸೇರಿತು. ಕನ್ನಡ ನಾಡಿನ ಭಾಗೀರಥಿ ಎಂದು ಕರೆಯಲಾಗುವ ಶರಾವತಿ ನದಿಗೆ ಅಡ್ಡಲಾಗಿ ಲಿಂಗನಮಕ್ಕಿ ಅಣೆಕಟ್ಟು ಕಟ್ಟಿದ್ದರಿಂದ, ಶರಾವತಿ ನದಿ ಇನ್ನೂ ಬಡವಾಯಿತು. ಲಿಂಗನಮಕ್ಕಿಯ 152 ಟಿ.ಎಂ.ಸಿ. ಸಂಗ್ರಹಣಾ ಸಾಮರ್ಥ್ಯ ಪೂರ್ಣ ಪ್ರಮಾಣದಲ್ಲಿ ತುಂಬದಿದ್ದಾಗ 1980ರಲ್ಲಿ ಪಶ್ಚಿಮ ವಾಹಿನಿಯಾಗಿ ಹರಿಯುವ ಸಾವೆಹಕ್ಲು ಮತ್ತು ಚಕ್ರಾ ನದಿಗಳನ್ನು ತಿರುಗಿಸಿ ಸಂತುಲನ ಅಣೆಕಟ್ಟುಗಳನ್ನು 1980 ಹಾಗೂ 1985ರಲ್ಲಿ ಕ್ರಮವಾಗಿ ನಿರ್ಮಿಸಲಾಯಿತು.

ಶರಾವತಿಗೆ ಒಟ್ಟು ಹನ್ನೆರಡು ಉಪನದಿಗಳು ಸೇರುತ್ತವೆ. ಆದ್ದರಿಂದ, ನದಿಗೆ ಸ್ಥಳೀಯವಾಗಿ ಭಾರಂಗಿ, ಭಾರಾಗಂಗಾ ಎಂದು ಕರೆಯಲಾಗುತ್ತದೆ. ಶರಾವತಿ ಬಡವಾಗುತ್ತಲೇ

